ಮಣ್ಣೂರ ಗ್ರಾಮದಡಿಯಲ್ಲಿಯೇ ಜನಗಣತಿಯನ್ನು ನಡೆಸಿ ಸಂಖ್ಯೆಯನ್ನು ತೋರಿಸಲಾಗಿದೆ. ಆದರೆ ಅಂದಾಜು ಈ ಗ್ರಾಮದಲ್ಲಿ 3,000ಕ್ಕಿಂತಲೂ ಹೆಚ್ಚಿನ ಜನ ವಸತಿ ಇರುತ್ತದೆ. ಹಾಗೂ ಈ ಗ್ರಾಮವು ಮುಖ್ಯ ಗ್ರಾಮದಿಂದ ಅಂದರೆ ಕೂಡಿಕೊಂಡಿರುವ ಗ್ರಾಮದಿಂದ 7 ಕಿ.ಮೀ. ಅಂತರದಲ್ಲಿದೆ.

ಆ) ಹೊಸೂರು ವಾಡಿ ಗ್ರಾಮವನ್ನು ಕಂದಾಯ ಗ್ರಾಮವನ್ನಾಗಿ ಪರಿವರ್ತಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ. ಆದರೆ, ಈಗ ಲೋಕಸಭಾ:ವಿಧಾನಸಭಾ ಕ್ಷೇತ್ರಗಳ ಪುನರ್‌ವಿಂಗಡಣಾ ಕಾರ್ಯವನ್ನು ಕೈಗೊಂಡಿರುವುದರಿಂದ, ಈ ಪ್ರಕ್ರಿಯೆ ಮುಗಿಯುವವರೆಗೂ ರಾಜ್ಯದ ಆಡಳಿತಾತ್ಮಕ ಘಟಕಗಳಾದ ಜಿಲ್ಲೆ, ತಾಲ್ಲೂಕು, ಉಪ ವಿಭಾಗ, ಹೋಬಳಿ, ಗ್ರಾಮಗಳು, ವಾರ್ಡ್‌ಗಳು ಇತ್ಯಾದಿಗಳ ಸ್ಥಿತಿ : ಸ್ಥಾನ 1991ರ ಜನಗಣತಿ ಆಧಾರದ ಮೇಲೆ ದಿನಾಂಕ 1–8–2002 ರಲ್ಲಿದ್ದಂತೆ ಇರತಕ್ಕದೆಂದೂ, ಅವುಗಳ ಗಡಿ : ಎಲ್ಲೆಗಳಲ್ಲಿ ಯಾವುದೇ ಬದಲಾವಣೆ : ಮಾರ್ಪಾಡು ಮಾಡಬಾರದೆಂದು ಕೇಂದ್ರ ಚುನಾವಣಾ ಆಯೋಗವು ನಿರ್ಬಂಧವಿಧಿಸಿರುತ್ತದೆ. ಈ ಪ್ರಕ್ರಿಯೆ ಪೂರ್ಣಗೊಂಡ ನಂತರ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಇ) ಹೌದು, 1987ರಲ್ಲಿ ಇದು ಗ್ರಾಮ ಪಂಚಾಯತಿ ಕೇಂದ್ರವಾಗಿತ್ತು. ನಂತರ ಇದನ್ನು ಮಣ್ಣೂರ ಗ್ರಾಮಕ್ಕೆ ಸ್ಥಳಾಂತರಿಸಲಾಗಿದೆ.

ಕೂಲಿಗಾಗಿ ಕಾಳು ಯೋಜನೆಯಲ್ಲಿ ಅವ್ಯವಹಾರ

235(56) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೂಲಿಗಾಗಿ ಕಾಳು ಯೋಜನೆಯಲ್ಲಿ ಇದುವರೆಗೆ ಜಪ್ತಿ ಮಾಡಲಾದ ಅಕ್ಕ ಮತ್ತು ಗೋಧಿಯ ಪ್ರಮಾಣವೆಷ್ಟು;

ಆ) ಅವ್ಯವಹಾರಗಳಲ್ಲಿ ಭಾಗಿಗಳಾದ ಎಷ್ಟು ಜನ ಆರೋಪಿಗಳನ್ನು ಇದುವರೆಗೆ ಬಂದಿಸಲಾಗಿದೆ;

ಇ) ಪಡಿತರ ವ್ಯವಸ್ಥೆಯಲ್ಲಿ ಇಂತಹ ಅವ್ಯವಹಾರಗಳು ನಡೆಯದಂತೆ ಸರ್ಕಾರ ಕೈಗೊಳ್ಳುವ ಮುಂಜಾಗ್ರತೆ ಕಾರ್ಯಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ, ಆ) 1. ರಾಜ್ಯದಲ್ಲಿ ಒಟ್ಟು 59 ಪೊಲೀಸ್ ಪ್ರಕರಣಗಳನ್ನು ದಾಖಲು ಮಾಡಿದ್ದು, 7369 ಕ್ವಿಂಟಾಲ್ ಅಕ್ಕಿ, 417 ಕ್ವಿಂಟಾಲ್ ಗೋದಿ ವಶಪಡಿಸಿಕೊಳ್ಳಲಾಗಿದೆ. ಈ ಪ್ರಕರಣಗಳಲ್ಲಿ 126 ಮಂದಿಯನ್ನು ದಸ್ತಗಿರಿ ಮಾಡಲಾಗಿದೆ.

2. ಮಂಗಳೂರಿನಲ್ಲಿ ಅಕ್ರಮ ಅಕ್ಕಿ ದಾಸ್ತಾನು 167032 ಕ್ವಿಂಟಾಲ್ ವಶಪಡಿಸಿಕೊಂಡಿದೆ. COD ರವರು 29 ಮಂದಿಯನ್ನು ದಸ್ತಗಿರಿ ಮಾಡಿದ್ದಾರೆ.

ಇ) ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ತಿರುಪತಿ–ತಿರುಮಲದಲ್ಲಿರುವ ಕರ್ನಾಟಕ ರಾಜ್ಯ ಛತ್ರದ ಆಸ್ತಿ ಪಾಸ್ತಿಗಳು

237(59) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತಿರುಪತಿ–ತಿರುಮಲದಲ್ಲಿರುವ ಕರ್ನಾಟಕ ರಾಜ್ಯ ಛತ್ರದ ಸ್ವಾಧೀನಕ್ಕೊಳಪಟ್ಟ ಭೂಮಿಯ ವಿಸ್ತೀರ್ಣವೆಷ್ಟು;